ಸಾಕ್ಷಿಯನ್ನು ದಿಃ 11-11-2019 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ</u> ಶ್ರೀ ಸಿ.ಡಿ.ಹೆಚ್ ಪರ ಶ್ರೀ ಎಮ್.ಎನ್.ಎ ವಕೀಲರಿಂದಃ**

2012 ರಲ್ಲಿ ಪೆಟ್ರೋಲ್ ಬಂಕನ್ನು ಪ್ರಾರಂಬಿಸಿರುತ್ತೇನೆ. ಗುತ್ತಿಗೆದಾರ ಅನುಮತಿಯನ್ನು ಯಾವ ಇಸ್ವಿಯಲ್ಲಿ ಪಡೆದುಕೊಂಡಿರುತ್ತೇನೆ ಎಂದು ನೆನಪಿಲ್ಲ. ಪೆಟ್ರೋಲ್ ಬಂಕಿನ ವ್ಯವಹಾರ ಮತ್ತು ಗುತ್ತಿಗೆಯ ವ್ಯವಹಾರಗಳ ಬಗೆಗಿನ ಲಾಭ ಮತ್ತು ನಷ್ಟದ ಬಗ್ಗೆ ಲೆಕ್ಕಪತ್ರ ವನ್ನು ನಿರ್ವಹಿಸುತ್ತಿರುತ್ತೇನೆ ಸದರಿ ಲೆಕ್ಕ ಪತ್ರ ವನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಹೆಚ್.ಡಿ.ಎಫ್ ಸಿ ಹುಬ್ಬಳ್ಳಿಯಲ್ಲಿ ನಾನು ಸಾಲವನ್ನು ಪಡೆದುಕೊಂಡಿಲ್ಲ. ಹೆಚ್.ಡಿ.ಎಫ್ ಸಿ ಬ್ಯಾಂಕಿಗೆ ಸಾಲವನ್ನು ಯಾವ ರೀತಿ ಮರು ಪಾವತಿ ಮಾಡಿರುತ್ತೇನೆ ಎಂದು ನೆನಪಿಲ್ಲ. ವಾದಿಯಿಂದ ಪಡೆದುಕೊಂಡ ಹಣವನ್ನು ಬ್ಯಾಂಕಿನ ಸಾಲದ ತಿರುವಳಿಗಾಗಿ ಬ್ಯಾಂಕಿಗೆ ಪಾವತಿಸಿರುತ್ತೇನೆ ಎಂದರೆ ಸರಿಯಲ್ಲ. ಬ್ಯಾಂಕುಗಳಿಗೆ ಸಾಲವನ್ನು ಮರು ಪಾವತಿ ಮಾಡಿದ ಬಗ್ಗೆ ಲೆಕ್ಕ ಪತ್ರ ವನ್ನು ನಿರ್ವಹಿಸಿರುವುದಿಲ್ಲ ಬ್ಯಾಂಕಿಗೆ ಸಾಲದ ಮರು ಪಾವತಿ ಹಣವನ್ನು ಯಾವ ಮೂಲದಿಂದ ಬಂದ ಹಣವನ್ನು ಪಾವತಿಸಿರುತ್ತೀರಾ ಎಂದು ಹೇಳುತ್ತಿರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ವಾದಿಯಿಂದ ಪಡೆದುಕೂಂಡ ಹಣವನ್ನು ಬ್ಯಾಂಕಿನ ಸಾಲದ ತಿರುವಳಿಗಾಗಿ ಪಾವತಿಸಿದ್ದರೂ ಸಹ ನನಗೆ ಮಾಹಿತಿ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತಿತದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತನ್ನು ಮಾರಾಟ ಮಾಡಲು ಹಚ್ಚಿ ನಂತರ ಅದನ್ನು ವಾದಿಗೆ ರೂ. 30,00,000/- ಗಳಿಗೆ ಮಾರಾಟ ಮಾಡಲು ಒಪ್ಪಿಕೊಂಡಿದ್ದೆನು ಎಂದರೆ ಸರಿಯಲ್ಲ. ನಂತರ

ಸದರಿ ಹಣದ ಪೈಕಿ 21,40,500/- ಹಣವನ್ನು ಸಾಕ್ಷಿದಾರರ ಸಮಕ್ಷಮ ವಾದಿಯಿಂದ ಪಡೆದುಕೊಂಡು ವಾದಿಯ ಹೆಸರಿಗೆ ನಿಪಿ-2 ನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ಕ್ಕೆ ನಾನೇ ಸ್ವತಃ ರುಜು ಮಾಡಿದ್ದರೂ ಸಹ, ಅದರಲ್ಲಿಯ ಸಹಿ ನನ್ನ ಸಹಿ ಅಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರ ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಹಿಃ 11.11.2019

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು

ಗದಗ